ಇ) ಈ ವಿಳಂಬಕ್ಕೆ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜೀನಿಯರ್‌ರವರೇ ಕಾರಣರೆಂಬುದು ನಿಜವೆ ?

ಈ) ಹಾಗಿದ್ದಲ್ಲಿ ಸದರಿಯವರ ಮೇಲೆ ಕೈಗು ತೆಗೆದುಕೊಳ್ಳುವುದರ ಜೊತೆಗೆ ಕಟ್ಟಡಗಳ (ಕೆಲಸದ) ಕಾರ್ಯವನ್ನು ಕೂಡಲೇ ಪ್ರಾರಂಭಿಸುವರೇ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು).—

ಅ) ಆಳಂದ್‌ನಲ್ಲಿ ಜೈಲು ಕಟ್ಟಡ ಮಂಜೂರಾಗಿಲ್ಲ. ನ್ಯಾಯಾಲಯದ ಬಗ್ಗೆ ಈಗ ಇರುವ ನ್ಯಾಯಾಲಯದ ಕಟ್ಟಡವನ್ನು ಕೆಡವಿ ಹೊಸ ನ್ಯಾಯಾಲಯದ ಕಟ್ಟಡ ಕಟ್ಟುವ ಪ್ರಸ್ತಾವನೆಗೆ 1985ರಲ್ಲಿ ಒಪ್ಪಿಗೆ ನೀಡಲಾಗಿತ್ತು. ಹಳೇ ಕಟ್ಟಡವು ಸುಸ್ಥಿತಿಯಲ್ಲಿರುವುದರಿಂದ ಅದನ್ನು ಕೆಡವದೆ ಉಳಿಸಿಕೊಂಡು ನ್ಯಾಯಾಲಯ ಕಟ್ಟಲು ಹೊಸ ಮಾದರಿಯ ನಕ್ಷೆಯಂತೆ ತಯಾರಿಸಿದ ಅಂದಾಜುಪಟ್ಟಿ ಇನ್ನೂ ಮಂಜೂರಾಗಿಲ್ಲ.

ಆ) ಇ) ಮತ್ತು ಈ) ಈ ಕಾಮಗಾರಿಗಳಿಗೆ ಅಂದಾಜುಗಳು ಮಂಜೂರಾದ ಮೇಲೆ ನಿಯಮಾನುಸಾರ ಕೆಲಸಗಳನ್ನು ತೆಗೆದುಕೊಳ್ಳಲಾಗುವುದು.

ದಂಡದ ರೂಪದಲ್ಲಿ ನೀರು ತೆರಿಗೆ

930 (2761) ಶ್ರೀ ಕೆ. ಜೆ. ರಾಮಸ್ವಾಮಿ (ಬನ್ನೂರು).—ಮಾನ್ಯ ಕಂದಾಯ ಯೋಜನೆ, ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ವಿಶ್ವೇಶ್ವರಯ್ಯ ನಾಲಾ ತುರುಗನೂರು ಶಾಖಾ ನಾಲಾ ಪ್ರದೇಶದ ಕಬ್ಬು ಬೆಳೆಗಾರರಿಗೆ ದಂಡದ ರೂಪದಲ್ಲಿ ನೀರು ತೆರಿಗೆ ವಿಧಿಸುತ್ತಿರುವ ವಿಚಾರ ಸರ್ಕಾರಕ್ಕೆ ಗೊತ್ತಿದೆಯೇ ? ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ?

ಆ) ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ನೀರಾವರಿ ಸಚಿವರು).—

ಅ) ಹೌದು. ನಿಗದಿತ ಬೆಳೆ ನಮೂನೆಯ ಉಲ್ಲಂಘನೆಯೇ ಕಾರಣ.

ಇ) ಯಾವ ಕ್ರಮದ ಅಗತ್ಯವೂ ಇಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಸಭೆಯ ಮುಂದಿಡಲಾಯಿತು.

ಕೃಷ್ಣಾ ಮೇಲ್ದಂಡೆ ಯೋಜನೆ

೧೩೫೫(೨೭೯೯) ಶ್ರೀ ಶಿವಶೇಖರ ಗೌಡ ಶಿರವಾಳ (ಶಹಾಪುರ).—ಮಾನ್ಯ ಕಂದಾಯ ಮತ್ತು ಯೋಜನೆ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ: —

ಅ) ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಒಬ್ಬ ವಿಶೇಷ ಜಿಲ್ಲಾಧಿಕಾರಿಗಳು ಕಾರ್ಯ ನಿರ್ವಹಿಸುತ್ತಲಿದ್ದು, ಅವರಿಗೆ ಸಾಕಷ್ಟು ಕಾರ್ಯಭಾರವಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಲಿ ವಿಶೇಷ ಜಿಲ್ಲಾಧಿಕಾರಿಗಳಿಗೆ ಸಾಕಷ್ಟು ಕೆಲಸವಿಲ್ಲದಿದ್ದರೂ ಇನ್ನೊಬ್ಬ ವಿಶೇಷ ಜಿಲ್ಲಾಧಿಕಾರಿಗಳ ಸ್ಥಾನಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದು ನಿಜವೆ?

ಇ) ಹಾಗಿದ್ದಲ್ಲಿ, ಸರ್ಕಾರಿ ಹಣ್ಣಿನ ಸ್ಥಾನವನ್ನು ಮಂಜೂರು ಮಾಡಿರುವುದು ಔಚಿತ್ಯವೆ ನು?

ಈ) ಹಾಗಿದ್ದಲ್ಲಿ, ಸರ್ಕಾರಕ್ಕೆ ಅನಾವಶ್ಯಕವಾಗಿ ಆಡಳಿತಾತ್ಮಕ ಹಾಗೂ ಆರ್ಥಿಕ ಭಾರ ಆಗುವುದಿಲ್ಲವೆ?